(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಬಸ್ಸು ದರ ಏರಿಕೆಯನ್ನು ವಿರೋಧಿಸುತ್ತಾ, ಬಸ್ಸು ದರ ಏರಿಸಲಾಗಿದ್ದ ಸರ್ಕಾರಿ ಆದೇಶವನ್ನು ಚೂರು ಮಾಡಿ ಗಾಳಿಗೆ ತೂರಿದರು ಮತ್ತು ದರ ಏರಿಕೆ ವಿರುದ್ಧ ಪ್ರತಿಭಟಿಸುತ್ತಾ ಸದನದ ಬಾವಿಯಲ್ಲಿ ಧರಣಿ ಮಾಡಿದರು.)

3. ಸನ್ಮಾನ್ಯ ಶ್ರೀ ಹೆಚ್.ಡಿ. ದೇವೇಗೌಡ ಅವರು ಈ ಬೃಹತ್ ರಾಷ್ಟ್ರದ ಪ್ರಧಾನಿಯಾಗಿರುವುದು ಮಹತ್ವದ ಸಂಗತಿ. ಕಳೆದ ವರ್ಷದವರೆಗೂ ಕರ್ನಾಟಕದ ಮುಖ್ಯಮಂತ್ರಿಯಾಗಿ ರಾಜ್ಯವನ್ನು ಮುನ್ನಡೆಸಿದ್ದ ಶ್ರೀ ಹೆಚ್.ಡಿ. ದೇವೇಗೌಡ ಅವರು ಇಂದು ಭಾರತದ ಪ್ರಧಾನಿಯಾಗಿರುವುದು ಕನ್ನಡಿಗರೆಲ್ಲರಿಗೂ ಹೆಮ್ಮೆ ತರುವ ವಿಚಾರ. ಸಾಮಾನ್ಯ ರೈತಾಪಿ ವರ್ಗದ ವ್ಯಕ್ತಿಯೊಬ್ಬರು ರಾಜಕೀಯವಾಗಿ ಹಂತಹಂತವಾಗಿ ಮೇಲೇರಿ ಈ ಮಹಾನ್ ರಾಷ್ಟ್ರದ ಪ್ರಧಾನಿಯಾಗಿರುವುದು, ನಮ್ಮ ಪ್ರಜಾಪ್ರಭುತ್ವದ ವ್ಯವಸ್ಥೆ ಜೀವಂತವಾಗಿ ಪುಟಿಯುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಇದಕ್ಕಿಂತ ಮುಖ್ಯ ಸಂಗತಿಯೆಂದರೆ, ಈ ಬೆಳವಣಿಗೆಯು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಅಪಾರ ಬದಲಾವಣೆಯನ್ನು ತಂದಿದೆ. ಜನಸಾಮಾನ್ಯರ ಬಗೆಗಿನ ಸರ್ಕಾರದ ಕಾಳಜಿ ಮತ್ತೆ ಅಗ್ರಸ್ಥಾನ ಗಳಿಸಿದೆ.

(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆಯವರ ನೇತೃತ್ವದಲ್ಲಿ ಸರ್ಕಾರದವರು ಬಸ್ ದರವನ್ನು ಅಯವ್ಯಯಕ್ಕೆ ಮುಂಚಿಯೇ ಏರಿಸಿ ಜನತೆಯ ಮೇಲೆ ಹೊರೆ ಹೊರಿಸಿರುವುದನ್ನು ವಿರೋಧಿಸಿ ಕಾಂಗ್ರೆಸ್ (ಐ) ಪಕ್ಷದವರು ಸಭಾತ್ಯಾಗ ಮಾಡಿದರು.)

4. ಭಾರತವು ತನ್ನ ಸ್ವಾತಂತ್ರ್ಯದ ಚಿನ್ನದ ಹಬ್ಬವನ್ನು ಆಚರಿಸುತ್ತಿರುವ ಸಂದರ್ಭದಲ್ಲಿಯೇ ಈ ಪ್ರಮುಖ ಘಟನೆಗಳು ನಡೆದಿರುವುದು ಒಂದು ಅಪೂರ್ವ ಪ್ರಸಂಗ. ಕಳೆದ ಐವತ್ತು ವರ್ಷಗಳಲ್ಲಿ ನಾವು ಪ್ರಗತಿಯ ಹಾದಿಯಲ್ಲಿ ಸಾಕಷ್ಟು ಮುನ್ನಡೆದಿದ್ದೇವೆ, ನಿಜ. ಆದರೂ, ನಮ್ಮ ಮುಂದೆ ಇನ್ನೂ ಹಲವಾರು ಸವಾಲುಗಳಿವೆ. ಇವುಗಳ ಬಗ್ಗೆ ಚಿಂತಿಸಲು ಇದು ಸಕಾಲ. ಈ ಸಂದರ್ಭದಲ್ಲಿ ಸ್ವತಂತ್ರ ಭಾರತದ ಸ್ವರೂಪದ ಬಗ್ಗೆ ಮಹಾತ್ಮಾ ಗಾಂಧೀಜಿಯವರ ಅಭಿಪ್ರಾಯವನ್ನು ನಾನು ಇಲ್ಲಿ ಸ್ಮರಿಕೊಳ್ಳುತ್ತೇನೆ.

"ನನ್ನ ಕಲ್ಪನೆಯ ಸ್ವರಾಜ್ಯವೆಂದರೆ ಜೀವನದ ಮೂಲ ಅವಶ್ಯಕತೆಗಳನ್ನು ಎಲ್ಲರೂ ಪಡೆಯಲಾಗುವ ರಾಷ್ಟ್ರವನ್ನು ರೂಪಿಸುವುದು. ಜೀವನಕ್ಕೆ ಬೇಕಾದ ಅವಶ್ಯಕತೆಗಳು ಎಲ್ಲರಿಗೂ ದೊರೆಯದಿದ್ದಲ್ಲಿ ಅದು ಪೂರ್ಣ ಸ್ವರಾಜ್ಯವೆನಿಸುವುದಿಲ್ಲ"

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರನ್ನು ಬೆಂಬಲಿಸಿ ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ ಮತ್ತು ಶ್ರೀ ಜೆ.ಪಿ. ಶ್ರೀರಾಮರೆಡ್ಡಿಯವರೂ ಸಹ ಸದನದ ಬಾವಿಯಲ್ಲಿ ಧರಣಿ ಕುಳಿತರು.)

5. ಬಾಪೂಜಿಯವರ ಈ ಕನಸುಗಳು ಇನ್ನೂ ನನಸಾಗಬೇಕಾಗಿದೆ. ಕೋಟ್ಯಾಂತರ ದುರ್ಬಲರು ನಮ್ಮ ಆರ್ಥಿಕ ಫಲಶ್ರುತಿಯಿಂದ ಇನ್ನೂ ದೂರವೇ ಉಳಿದಿದ್ದಾರೆ. ನಮ್ಮ ಪ್ರಗತಿಯಲ್ಲಿ ಅವರಿನ್ನೂ ಸಮಾನ ಪಾಲುದಾರರಾಗಬೇಕಾಗಿದೆ.